ಯಲ್ಲಿ ಮುನ್ಸೀಫ್ ಅಥವಾ ಜೆ.ಎಂ.ಎಫ್.ಸಿ. ಕೋರ್ಟ್ ಸ್ಥಾಪನೆ ಮಾಡುವುದರ ಬಗ್ಗೆ ಒಪ್ಪಿಗೆ ಇಲ್ಲವೆಂದು ಬರೆದಿದ್ದಾರೆ. ಆದರೂ ಈ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವುದರಿಂದ ಪುನಃ ಇದರ ಬಗ್ಗೆ ಉಚ್ಚ ನ್ಯಾಯಾಲಯಕ್ಕೆ ಬರೆಯುತ್ತೇವೆ. ಪುನಃ ಅನುಮತಿ ಕೊಡಬೇಕೆಂದು ಶಿಫಾರಸು ಮಾಡುತ್ತೇವೆ. ಆದರೆ ತಮ್ಮ ಮಾಹಿತಿ ಸರಿಯಿಲ್ಲ.

ಲೋಕೋಪಯೋಗಿ ಇಲಾಖೆಯವರಿಂದ ಕಾಮಗಾರಿ ನಿರ್ವಹಣೆ

೫೫೩ (೧೬೬೫) ಶ್ರೀ ಕೆ. ಕುಶಾಲ(ಸುಳ್ಯ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬರುವ ಮೊದಲು ಮತ್ತು ನಂತರ ಕಾಮಗಾರಿಗಳ ಅಂದಾಜು ಮೌಲ್ಯ ರೂ. ೫ ಲಕ್ಷಕ್ಕೆ ಮೀರಿದರೆ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯವರೇ ಪೂರೈಸುವರೆ?

ಆ) ಪೂರೈಸದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಜಿ ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ರೂ. ೫ ಲಕ್ಷಕ್ಕೆ ಮೀರಿದ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯು ಪೂರೈಸುವ ಪ್ರಸ್ತಾವನೆಯು ಇರುವುದಿಲ್ಲ.

ಆ) ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ನಂತರ ಲೋಕೋಪಯೋಗಿ ಇಲಾಖೆಯಲ್ಲಿದ್ದ ಇತರ ಜಿಲ್ಲಾ ರಸ್ತೆಗಳು, ಹಳ್ಳಿ ರಸ್ತೆಗಳು, ಕನಿಷ್ಠ ಅವಶ್ಯಕತೆ ಯೋಜನೆಯಲ್ಲಿ ಬರುವ ಕಾಮಗಾರಿಗಳು, ಪ್ರಾಥಮಿಕ ಹಾಗೂ ಸೆಕೆಂಡರಿ ಶಾಲಾ ಕಟ್ಟಡಗಳು, ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಗಳು ಇತ್ಯಾದಿ ಇವುಗಳನ್ನು ಆಸ್ತಿ ಮತ್ತು ಚರಣಗಳ ಸಹಿತ ಜಿಲ್ಲಾ ಪರಿಷತ್ತಿನವರೇ ನಿರ್ವಹಿಸುವಂತೆ ಸರ್ಕಾರದ ಆದೇಶವಿರುವುದರಿಂದ ಹಾಗೂ ಜಿಲ್ಲಾ ಪರಿಷತ್ತು ಸ್ವಾಯತ್ತ ಸಂಸ್ಥೆ ಆಗಿರುವುದರಿಂದ. ಲೋಕೋಪಯೋಗಿ ಇಲಾಖೆಯು ಈ ಕಾಮಗಾರಿಗಳನ್ನು ತೆಗೆದುಕೊಳ್ಳಲು ಬರುವುದಿಲ್ಲ.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ೧೯೭೭ನೇ ಇಸವಿಯಲ್ಲಿ ನನ್ನ ಕ್ಷೇತ್ರದಲ್ಲಿ ಸೇತುವೆ ಮತ್ತು ಒಂದು ಕಾಮಗಾರಿಗೆ ತಲಾ ೨೦ ಲಕ್ಷ ರೂಪಾಯಿಗಳನ್ನು ಸರ್ಕಾರ ಮಂಜೂರು ಮಾಡಿತ್ತು. ೧೯೮೪–೮೫ ರಿಂದ ೧೯೮೫–೮೭ರವರೆಗೆ ಲೋಕೋಪಯೋಗಿ ಇಲಾಖೆಯಿಂದ ಆ ಕಾಮಗಾರಿಯನ್ನು ಪೂರೈಸಲಿಕ್ಕಾಗಲಿಲ್ಲ. ಪುನಃ ಜಿಲ್ಲಾಪರಿಷತ್ತುಗಳು ಅಸ್ತಿತ್ವಕ್ಕೆ ಬಂದ ನಂತರ ೧೯೮೭ರಿಂದ ೧೯೯೧ರ ವರೆಗೂ ಆ ಕಾಮಗಾರಿಯನ್ನು ಪ್ರಾರಂಭಿಸಲೇ ಇಲ್ಲ. ಆದ್ದರಿಂದ ಈ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯವರೇ ನೇರವಾಗಿ ತೆಗೆದುಕೊಂಡು ಅದಕ್ಕೆ ಪ್ರತ್ಯೇಕವಾಗಿ ಹಣ ಒದಗಿಸಿ ಕೆಲಸ ಪೂರೈಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈ ಕಾಮಗಾರಿ ಕೆಲಸ ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರುತ್ತದೆ.

ಕೊಪ್ಪದಲ್ಲಿ ನ್ಯಾಯಾಲಯ ಸ್ಥಾಪಿಸುವ ಬಗ್ಗೆ

೫೫೪ (೧೬೯೧) ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಪ್ರತಿ ತಾಲ್ಲೂಕಿಗೆ ಒಂದು ನ್ಯಾಯಾಲಯ ಕೊಡಬೇಕೆಂಬ ಸರ್ಕಾರದ ನೀತಿಯಂತೆ ಚಿಕ್ಕಮಗಳೂರು ಜಿಲ್ಲಾ ಕೊಪ್ಪ ತಾಲ್ಲೂಕಿನಲ್ಲಿ ಕೋರ್ಟು ಪ್ರಾರಂಭಿಸುವ ಯೋಚನೆ ಇದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?